G20

# ಕರ್ನಾಟಕ ಸರ್ಕಾರ

## ಕಾರ್ಖಾನೆಗಳು, ಬಾಯ್ಲರುಗಳು, ಕೈಗಾರಿಕಾ ಸುರಕ್ಷತೆ ಮತ್ತು ಸ್ವಾಸ್ಥ್ಯ ಇಲಾಖೆ

☎ 080 – 29753051
directorfbish@gmail.com
www.esuraksha.karnataka.gov.in

ನಿರ್ದೇಶನಾಲಯ,
ಕಲ್ಯಾಣ ಸುರಕ್ಷಾ ಭವನ, 2ನೇ ಮಹಡಿ,
ಬನ್ನೇರುಘಟ್ಟ ರಸ್ತೆ, ಬೆಂಗಳೂರು – 560029

ಸಂ: ಇಎಸ್‌ಟಿ–1/ಇತರೆ/ಸಿಆರ್–396/2022–23 ದಿನಾಂಕ: 23–03–2023

**ಸುತ್ತೋಲೆ**

**ವಿಷಯ :** ಕಾರ್ಖಾನೆಗಳನ್ನು ರ್‍ಯಾಂಡಮ್ ಸ್ಯಾಂಪ್ಲಿಂಗ್ ಆಧಾರದ ಮೇಲೆ ಪರಿವೀಕ್ಷಿಸಿ, ಪರಿವೀಕ್ಷಣಾ ವರದಿಗಳನ್ನು ಆನ್‌ಲೈನ್‌ನಲ್ಲಿ ಕಡ್ಡಾಯವಾಗಿ ಅಪ್‌ಲೋಡ್ ಮಾಡುವ ಬಗ್ಗೆ.

**ಉಲ್ಲೇಖ :**
1. ಸರ್ಕಾರದ ಅಧಿಸೂಚನೆ ಸಂಖ್ಯೆ: CI 48 SPI 2019, ದಿ: 21–02–2019 ಹಾಗೂ ದಿ: 07–10–2020.
2. ಈ ಕಛೇರಿ ಪತ್ರ ಸಂ: ಇಎಸ್‌ಟಿ–1/ಇತರೆ/ಸಿಆರ್–396/2022–23, ದಿ: 01–09–2020

* * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (1)ರ ಸರ್ಕಾರದ ಅಧಿಸೂಚನೆಯಲ್ಲಿ ವಿವಿಧ ಇಲಾಖೆಗಳು ಹಾಗೂ ಇಲಾಖೆಯ ವಿವಿಧ ಕಾಯ್ದೆಗಳು / ನಿಯಮಗಳ ಅಡಿಯಲ್ಲಿ ಅನುಸರಣೆ ತಪಾಸಣೆಗಳನ್ನು ಕೈಗೊಳ್ಳಲು ಕರ್ನಾಟಕ ಸರ್ಕಾರವು ಈಗಾಗಲೇ ಕೇಂದ್ರೀಯ ತಪಾಸಣಾ ವ್ಯವಸ್ಥೆಯನ್ನು ಸಾಂಸ್ಥಿಕಗೊಳಿಸಿದೆ.

ಇಲಾಖೆಯು ವಿವಿಧ ಕಾರ್ಮಿಕ ಕಾನೂನುಗಳಡಿಯಲ್ಲಿ ನಡೆಸುವ ಪರಿವೀಕ್ಷಣೆಗಳಲ್ಲಿ ಏಕರೂಪತೆಯನ್ನು ತರುವ ನಿಟ್ಟಿನಲ್ಲಿ ಹಾಗೂ ಕೇಂದ್ರ ಸರ್ಕಾರದ ವ್ಯವಹಾರ ಸರಳೀಕರಣ ಯೋಜನೆಯಡಿಯಲ್ಲಿ ಕಾರ್ಖಾನೆಗಳನ್ನು ರ್‍ಯಾಂಡಮ್ ಸ್ಯಾಂಪ್ಲಿಂಗ್ ಆಧಾರದ ಮೇಲೆ ಪರಿವೀಕ್ಷಿಸಿ, ಪರಿವೀಕ್ಷಣಾ ವರದಿಯನ್ನು ಪರಿವೀಕ್ಷಿಸಿದ 48 ಗಂಟೆಯೊಳಗೆ ಆನ್‌ಲೈನ್‌ನಲ್ಲಿ ಲಭ್ಯವಾಗುವಂತೆ ಇಲಾಖೆಯ ತಂತ್ರಾಂಶದಲ್ಲಿ ಅಪ್‌ಲೋಡ್ ಮಾಡುವಂತೆ ಈಗಾಗಲೇ ಉಲ್ಲೇಖ (2)ರಂತೆ ಸೂಚಿಸಲಾಗಿರುತ್ತದೆ.

ಇಲಾಖಾ ವೆಬ್‌ಸೈಟ್‌ನಲ್ಲಿ ಪರಿವೀಕ್ಷಣಾ ವರದಿಯನ್ನು ಅಪ್‌ಲೋಡ್ ಮಾಡಲು ಮತ್ತು ಅನುಸರಣಾ ವರದಿಗಳನ್ನು ಪಡೆಯಲು ತಂತ್ರಾಂಶವನ್ನು ಅಭಿವೃದ್ಧಿ ಪಡಿಸಿದ್ದು ಎಲ್ಲಾ ವಿಭಾಗೀಯ ಅಧಿಕಾರಿಗಳು 2023–24ನೇ ಸಾಲಿನ ದಿ: 01–04–2023 ರಿಂದ ಪ್ರತೀ ತಿಂಗಳಿನಲ್ಲಿ ರ್‍ಯಾಂಡಮ್ ಸ್ಯಾಂಪ್ಲಿಂಗ್ ಆಧಾರದಲ್ಲಿ ನಿಗಧಿಪಡಿಸಲಾದ ಕಾರ್ಖಾನೆಗಳನ್ನು ಆಯಾ ತಿಂಗಳಿನಲ್ಲಿಯೇ ಪರಿವೀಕ್ಷಣೆ ನಡೆಸಿ, ಪರಿವೀಕ್ಷಣೆ ನಡೆಸಿದ 48 ಗಂಟೆಯೊಳಗೆ ಪರಿವೀಕ್ಷಣಾ ವರದಿಯನ್ನು ಇಲಾಖೆಯ ತಂತ್ರಾಂಶದಲ್ಲಿ ಅಪ್‌ಲೋಡ್ ಮಾಡುವುದು ಕಡ್ಡಾಯವಾಗಿರುತ್ತದೆ.

ಅತೀ ಅಪಾಯಕಾರಿ ಮತ್ತು ಅಪಾಯಕಾರಿ ಕಾರ್ಖಾನೆಗಳನ್ನು ಹೊರತುಪಡಿಸಿ ಉಳಿದ ಕಾರ್ಖಾನೆಗಳನ್ನು ರ್‍ಯಾಂಡಮ್ ಸ್ಯಾಂಪ್ಲಿಂಗ್ ಆಧಾರದ ಮೇಲೆ ಪರಿವೀಕ್ಷಿಸುವುದು ಕಡ್ಡಾಯವಾಗಿರುತ್ತದೆ ಮತ್ತು ರ್‍ಯಾಂಡಮ್ ಸ್ಯಾಂಪ್ಲಿಂಗ್ ಪಟ್ಟಿಯನ್ನು ಹೊರತುಪಡಿಸಿ, ಸಕಾರಣವಿಲ್ಲದೆ ಯಾವುದೇ ಅಪಾಯಕಾರಿಯಲ್ಲದ ಕಾರ್ಖಾನೆಗಳನ್ನು ಪರಿವೀಕ್ಷಿಸದಿರಲು ಹಾಗೂ ನಿಗಧಿತ ಅವಧಿಯಲ್ಲಿಯೇ ಪರಿವೀಕ್ಷಣಾ ವರದಿಯನ್ನು ತಂತ್ರಾಂಶದಲ್ಲಿ ಅಪ್‌ಲೋಡ್ ಮಾಡಲು ಎಲ್ಲಾ ಕ್ಷೇತ್ರಾಧಿಕಾರಿಗಳಿಗೆ ಈ ಮೂಲಕ ಸೂಚಿಸಿದೆ. ಕಾರ್ಖಾನೆಗಳ ಜಂಟಿ ನಿರ್ದೇಶಕರು (ವೈದ್ಯಕೀಯ), ಬೆಂಗಳೂರು ಹಾಗೂ ಔದ್ಯೋಗಿಕ ಆರೋಗ್ಯ ತಜ್ಞರು ಸಹ ಸದರಿ ಕ್ರಮವನ್ನು ಪರಿಪಾಲಿಸಲು ಈ ಮೂಲಕ ಸೂಚಿಸಿದೆ.

ನಿರ್ದೇಶಕರು
ಕಾರ್ಖಾನೆಗಳು, ಬಾಯ್ಲರುಗಳು, ಕೈಗಾರಿಕಾ ಸುರಕ್ಷತೆ
ಮತ್ತು ಸ್ವಾಸ್ಥ ಇಲಾಖೆ, ಬೆಂಗಳೂರು

-----2

ಇವರಿಗೆ:

1. ಕಾರ್ಖಾನೆಗಳು ಮತ್ತು ಬಾಯ್ಲರುಗಳ ಅಪರ ನಿರ್ದೇಶಕರು, ಬೆಂಗಳೂರು.
2. ಕಾರ್ಖಾನೆಗಳ ಜಂಟಿ ನಿರ್ದೇಶಕರು (ವೈದ್ಯಕೀಯ), ಬೆಂಗಳೂರು.
3. ಕಾರ್ಖಾನೆಗಳ ಜಂಟಿ ನಿರ್ದೇಶಕರು ವಿಭಾಗ – 1 / 2 ಬೆಂಗಳೂರು/ ಮೈಸೂರು ವಲಯ / ಹುಬ್ಬಳ್ಳಿ ವಲಯ.
4. ಔದ್ಯೋಗಿಕ ಆರೋಗ್ಯ ತಜ್ಞರು, ಪ್ರಧಾನ ಕಛೇರಿ, ಬೆಂಗಳೂರು.
5. ಆಡಳಿತಾಧಿಕಾರಿ, ಬೆಂಗಳೂರು.
6. ಕಾರ್ಖಾನೆಗಳ ಉಪ ನಿರ್ದೇಶಕರು, ಬೆಂಗಳೂರು ವಿಭಾಗ – 1 / 2 / 3 / , ರಾಮನಗರ ವಿಭಾಗ, ಹೊಸಕೋಟೆ ವಿಭಾಗ / ಮೈಸೂರು ವಿಭಾಗ – 1 / ಬೆಳಗಾವಿ ವಿಭಾಗ–1 / ಮಂಗಳೂರು ವಿಭಾಗ–1 / ಕಲಬುರ್ಗಿ ವಿಭಾಗ / ತುಮಕೂರು ವಿಭಾಗ.
7. ಕಾರ್ಖಾನೆಗಳ ಹಿರಿಯ ಸಹಾಯಕ ನಿರ್ದೇಶಕರು, ಬೆಂಗಳೂರು ವಿಭಾಗ– 6 / 7 / 8 / 9 / 10, / ಹುಬ್ಬಳ್ಳಿ ವಿಭಾಗ –1 / ಬೆಳಗಾವಿ ವಿಭಾಗ–2 / ಬಳ್ಳಾರಿ ವಿಭಾಗ.
8. ಕಾರ್ಖಾನೆಗಳ ಸಹಾಯಕ ನಿರ್ದೇಶಕರು, ಬೆಂಗಳೂರು ವಿಭಾಗ – 11 / 12 / 13 / 14 / 15 / 16 / 17 / 18 ದಾವಣಗೆರೆ ವಿಭಾಗ / ಶಿವಮೊಗ್ಗ ವಿಭಾಗ / ರಾಯಚೂರು ವಿಭಾಗ / ಹುಬ್ಬಳ್ಳಿ ವಿಭಾಗ–2 / ವಿ–2, ಮೈಸೂರು / ವಿ–2, ಮಂಗಳೂರು.
9. ಕಛೇರಿ ಪ್ರತಿ.